# ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು

ಸಂಖ್ಯೆ:ಸಿಎಂಸಿ/ಸಿಕೆಎಂ/ಮಿಸ್/ಸಿ.ಆರ್/05/07-08. ದಿನಾಂಕ: 01-10-2007

## ಚಿಕ್ಕಮಗಳೂರು ನಗರಸಭೆಯ ಮಳಿಗೆಗಳ ಪರವಾನಗಿ ಫೀ ಆಧಾರದ ಮರು ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದು ಏನೆಂದರೆ,

ಚಿಕ್ಕಮಗಳೂರು ನಗರಸಭೆಯ ವಿವಿಧ ರಸ್ತೆಗಳಲ್ಲಿ ಖಾಲಿ ಇರುವ 10 ವಾಣಿಜ್ಯ ಮಳಿಗೆಗಳು ಮಾಹೆಯಾನ ಪರವಾನಗಿ 5 ವರ್ಷಗಳ ಅವಧಿಗೆ ದಿನಾಂಕ:26-10-2007 ರಂದು ಬೆಳಿಗ್ಗೆ 11-00 ಗಂಟೆಗೆ ನಗರಸಭಾ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದವರಿಂದಾಗಲೀ ನಗರಸಭಾ ಕಛೇರಿ ಆವರಣದಲ್ಲಿ ವಿವಿಧ ಸ್ಥಳಗಳಲ್ಲಿರುವ ಮಳಿಗೆಗಳನ್ನು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಮಳಿಗೆ ಪಡೆಯಬಹುದು.

### –:ಮಳಿಗೆ ವಿವರ:–

| ಕ್ರ. ಸಂ | ಬಾಬುಗಳ ವಿವರ | ಮಳಿಗೆಗಳ ಸಂಖ್ಯೆ | ಒಟ್ಟು | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ ಮೊತ್ತ ಪ್ರತಿ ಮಳಿಗೆಗೆ. | ಹರಾಜಿನ ದಿನಾಂಕ | ಹರಾಜು ಮಾಡುವ ಸ್ಥಳ | ಸಮಯ |
|---|---|---|---|---|---|---|---|
| 1 | ಮಟನ್ ಮಾರ್ಕೆಟ್ ಮುಂಭಾಗದ ಮಳಿಗೆಗಳು | 1,5 | 2 | 25,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |
| 2 | ಖಾಸಗಿ ಬಸ್ ನಿಲ್ದಾಣದ ಹತ್ತಿರದ ಮಳಿಗೆಗಳು | 3 | 1 | 25,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |
| 3 | ಖಾಸಗಿ ಬಸ್ ನಿಲ್ದಾಣದ 10 ನೇ ಹಣಕಾಸಿನ ಮಳಿಗೆ | 1 | 1 | 25,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |
| 4 | ಸಂತೆ ಮೈದಾನದ ಒಳಗಡೆ ಇರುವ ಮಳಿಗೆಗಳು | 15 | 1 | 10,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |
| 5 | ಹಿರೇಮಗಳೂರು ಬಸ್ ನಿಲ್ದಾಣದ ಹತ್ತಿರದ ಮಳಿಗೆಗಳು (ಬಸ್ ಶೆಲ್ಟರ್ ಮಳಿಗೆ) | 1 | 1 | 5,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |
| 6 | ಉಪ್ಪಳ್ಳಿ ಬಸ್ ನಿಲ್ದಾಣ ಹತ್ತಿರ ಮಳಿಗೆ | 1 | 1 | 5,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |
| 7 | ಹಿರೇಮಗಳೂರು ಬಸ್ ನಿಲ್ದಾಣದ ಬಳಿ ಮಳಿಗೆಗಳು. | 6 (ಎಸ್.ಸಿ) ,7 | 2 | 5,000/- | 26-10-07 | ನಗರಸಭಾ ಕಛೇರಿ ಸಭಾಂಗಣ | ಬೆಳಗ್ಗೆ 11-00 |

### –:ಷರತ್ತುಗಳು:–

1. ಮಳಿಗೆಗಳು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು. ಯಾವುದೇ ದುರಸ್ತಿಯನ್ನು ನಗರಸಭೆ ಮಾಡುವುದಿಲ್ಲ. ಅವರ ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳುವುದು.
2. ಹರಾಜು ಖೈದಾದ ಕೂಡಲೇ ಆಖೈರು ಸವಾಲುದಾರರು ಮೂಲ ಠೇವಣಿ ಮೊತ್ತ ಮಳಿಗೆಗೆ ಸಂಭಂದಿಸಿದಂತೆ ಭದ್ರತಾ ಠೇವಣಿಯಾಗಿ ನಗರಸಭೆಗೆ ಪಾವತಿ ಮಾಡಿ ರಶೀದಿ ಪಡೆಯತಕ್ಕದ್ದು. ಈ ಭದ್ರತಾ ಠೇವಣಿ ಮೊತ್ತಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನಗರಸಭೆ ನೀಡುವುದಿಲ್ಲ.
3. ಭದ್ರತಾ ಠೇವಣಿಯನ್ನು ಮುಂಗಡವಾಗಿ ನಗರಸಭೆಗೆ ಪಾವತಿಸದಿದ್ದಲ್ಲಿ ದೂಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲನೇ ಹರಾಜುದಾರರಿಂದ ವಸೂಲು ಮಾಡಲಾಗುತ್ತದೆ. ಆದಾಯ ಬಂದಲ್ಲಿ ಅವರಿಗೆ ಹಕ್ಕಿರುವುದಿಲ್ಲ. ಹಾಗೂ ಹರಾಜಿನಲ್ಲಿ ಬಿಡ್ ಮಾಡಲು ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ನಷ್ಟ ಉಂಟಾದಲ್ಲಿ ವಸೂಲಿ ಮಾಡಲಾಗುವುದು.
4. ಪ.ಜಾ ಮತ್ತು ಪ.ಪಂ ದವರಿಗೆ ಶೇ. 18 ರ ರೋಸ್ಟರ್ ಪದ್ಧತಿಯ ಅನುಸಾರ ಹಿರೇಮಗಳೂರಿನ ನಗರಸಭಾ ನಿಧಿಯ 6ನೇ ಮಳಿಗೆ ಪ.ಜಾ. ಯವರಿಗೆ ಮತ್ತು ಮಾರ್ಕೆಟ್ ರಸ್ತೆ, ಮಟನ್ ಮಾರ್ಕೆಟ್ ಮುಂಭಾಗದ ಮಳಿಗೆ ನಂ 1 ನ್ನು ಪ.ಪಂ.ದವರಿಗೆ ಮೀಸಲಾಗಿರಿಸಿದೆ. ಈ ಮಳಿಗೆಗಳ ಹರಾಜಿನಲ್ಲಿ ಕ್ರಮವಾಗಿ ಪ.ಜಾ. ಮತ್ತು ಪ.ಪಂ. ದವರು ಮಾತ್ರ ಭಾಗವಹಿಸಲು ಆಸ್ಪದವಿರುತ್ತದೆ. ಈ ಬಗ್ಗೆ ಸೂಕ್ತ ದಾಖಲೆ ಒದಗಿಸಬೇಕಾಗುತ್ತದೆ.
5. ಹರಾಜನ್ನು ಒಪ್ಪಿಕೊಳ್ಳಲು ಅಥವ ಯಾವ ಕಾರಣವನ್ನು ತಿಳಿಸದೇ ತಿರಸ್ಕರಿಸುವ ಹಕ್ಕು ನಗರಸಭೆಗೆ ಇರುತ್ತದೆ.
6. ಹರಾಜು ಖಾಯಂ ಆಗಿರುವ ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರನು ಪರವಾನಗಿ ಫೀ ಪಾವತಿದಾರನೆಂದು ಕರೆಯಲ್ಪಡುತ್ತಾರೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹಾರಾಜು ಇಸ್ತಿಹಾರ್‌ನಲ್ಲಿ ವಿಧಿಸಿರುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ಧರಾಗಿರುತ್ತೇವೆಂತಲೂ ಮತ್ತು ಆಗಿಂದಾಗ್ಗೆ ನಗರಸಭಾ ಕಛೇರಿಯಿಂದ ಕೊಡಬಹುದಾದ ಹುಕುಂಗಳಿಗೆ ಬದ್ಧರಾಗಿರುತ್ತೇವೆಂದು ಛಾಪಾ ಕಾಗದದಲ್ಲಿ ಸ್ಟ್ಯಾಂಪ್ ಕಾಯಿದೆ (ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದು ಸ್ವಂತ ಖರ್ಚಿನಿಂದ ರಿಜಿಸ್ಟರ್ ಮಾಡಿಸಿಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದೂಸರಾ ಹರಾಜಿನಲ್ಲಿ ಆಗುವ ನಷ್ಟವನ್ನು ಮೊದಲನೆಯ ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. ಆದಾಯ ಬಂದಲ್ಲಿ ಅವರಿಗೆ ಯಾವ ಹಕ್ಕು ಇರುವುದಿಲ್ಲ. ಒಪ್ಪಂದ ಪತ್ರ ಮಾಡದೇ ಯಾವ

ಕಾರಣದಿಂದಲೂ ಪರವಾನಗಿ ಫೀ ಪಾವತಿದಾರನಾಗಿರುವುದಿಲ್ಲ. ಹಾಗೂ ಅವರಿಗೆ ಯಾವ ಹಕ್ಕು ಇರುವುದಿಲ್ಲ. ಆದೇಶವನ್ನು ಮೀರಿ ಒಪ್ಪಂದ ಪತ್ರವನ್ನು ಷರತ್ತಿನಂತೆ ಮಾಡದೇ ಇದ್ದ ಪಕ್ಷದಲ್ಲಿ ದುಸರಾ ಹರಾಜಿನಲ್ಲಿ ಆಗುವಂತಹ ನಷ್ಟವನ್ನು ಅಖೈರು ಬಿಡ್‌ದಾರರಿಂದ ವಸೂಲು ಮಾಡಲಾಗುವುದು.

7. ಪರವಾನಗಿ ಫೀ ಪಾವತಿದಾರನು ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೊಡದು ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಪರವಾನಗಿಯನ್ನು ತಪ್ಪಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡ ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ನಗರಸಭಾ ಹರಾಜು ಮಳಿಗೆ ಹೇಗಿದೆಯೋ ಹಾಗೆಯೇ ನಗರಸಭೆಯ ಸ್ವಾಧೀನಪಡಿಸಿ ಕೊಳ್ಳಲಾಗುವುದು. ಮತ್ತು ಪರವಾನಗಿ ವಾಯಿದೆಯವರೆಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು.

8. ಪರವಾನಗಿ ಫೀ ಮೊಬಲಗನ್ನು ಪ್ರತೀ ತಿಂಗಳು 4 ನೇ ದಿನಾಂಕದೊಳಗೆ ನಗರಸಭಾ ಕಛೇರಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡುವುದನ್ನು ಒಂದು ತಿಂಗಳು ತಪ್ಪಿಸಿದರೆ ಪರವಾನಗಿಯನ್ನು ತಪ್ಪಿಸಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

9. ಮೇಲ್ಕಂಡಂತೆ ವಾಯಿದೆವರೆಗೆ ಸರಿಯಾಗಿ ಪಾವತಿಯಾಗದೇ ನಿಂತ ಬಾಕಿಗಳ ಮೇಲೆ ಹಣ ಪಾವತಿಸುವ ತಾರೀಖಿನವರೆಗೆ ಸಾಲಿಯಾನ ಶೇಕಡ 18-00 ರಂತೆ ಬಡ್ಡಿ ವಸೂಲು ಮಾಡ ಬಹುದಾಗಿರುತ್ತೆ. ಹಾಗೂ ಖಿಸ್ತು ಪಾವತಿಯಾಗದಿದ್ದಲ್ಲಿ ಅಂಗಡಿಯನ್ನು ಮುಚ್ಚಲು ಮತ್ತು ಬಾಕಿ ವಸೂಲಿಗಾಗಿ ಕಾನೂನು ಕ್ರಮ ಜರುಗಿಸಲು ಪೌರಾಯುಕ್ತರಿಗೆ ಅಧಿಕಾರ ಇರುತ್ತದೆ.

10. ಪರವಾನಗಿ ಫೀ ಪಾವತಿದಾರರಿಂದ ಬರಬೇಕಾದ ಮೊಬಲಗು 1964 ನೇ ಕರ್ನಾಟಕ ನಗರಸಭಾ ಕಾಯಿದೆ ಅಧ್ಯಾಯ 7, ಪ್ರಕರಣ 142 ಮತ್ತು 143 ರಂತೆ ದತ್ತವಾಗಿರುವ ಮೇರೆಗೆ ವಸೂಲು ಮಾಡುವುದಕ್ಕೂ ನಗರಸಭೆ ಅಧಿಕಾರ ಹೊಂದಿರುತ್ತದೆ.

11. ಪರವಾನಗಿ ಫೀ ಪಾವತಿದಾರನಾಗಲೀ ಅತನ ನೌಕರನಾಗಲೀ ಹರಾಜು ಇಸ್ತಿಹಾರ್ ಷರತ್ತು ಅಥವಾ ಹುಕುಂ ಉಲ್ಲಂಘಿಸಿದಲ್ಲಿ ಅತನ ಪರವಾನಗಿ ತಪ್ಪಿಸಿ ಸೂಕ್ತ ರೀತಿ ವಿಲೇವಾರಿ ಮಾಡಲು ಪೌರಾಯುಕ್ತರಿಗೆ ಅಧಿಕಾರವಿರುತ್ತದೆ.

12. ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಪರವಾನಗಿ ಫಿ ಪಾವತಿದಾರರು ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತು ಹರಾಜಿನಲ್ಲಿ ಭಾಗವಹಿಸಲು ಅಧಿಕಾರವಿರುವುದಿಲ್ಲ.

13. ಕಟ್ಟಡದ ಬಾಬ್ತು, ವಿದ್ಯುಚ್ಛಕ್ತಿ ತೆರಿಗೆ ಬಗ್ಗೆ ಠೇವಣಿ ಆಗಿ ರೂ. 500-00 ಹರಾಜು ಖಾಯಂ ಅದ ಕೂಡಲೇ ನಗರಸಭೆಗೆ ಜಮಾ ಮಾಡತಕ್ಕದ್ದು. ಹಾಗೂ ಪ್ರತೀ ತಿಂಗಳು ಪರವಾನಗಿ ಫೀ ಪಾವತಿದಾರರು ವಿದ್ಯುಚ್ಛಕ್ತಿ ಶುಲ್ಕ ಕಟ್ಟತಕ್ಕದ್ದು.

14. ಮೇಲ್ಕಂಡ ಹರಾಜಿನಲ್ಲಿ ಅಂಗೀಕರಿಸಲ್ಪಟ್ಟ ಪರವಾನಗಿ ಫೀ ಪಾವತಿದಾರರಿಗೆ ಸದರಿ ಮಳಿಗೆಗಳಲ್ಲಿ ಸರಕು ಸಾಮಗ್ರಿಗಳ ಮಾರಾಟ ಮಾಡುವ ಹಕ್ಕು ಮಾತ್ರ ಇರುತ್ತದೆ. ವಿನಃ ಮಳಿಗೆಗಳ ಸ್ವಾಧೀನ ನಗರಸಭೆಯವರದ್ದೇ ಆಗಿರುತ್ತದೆ. ಹಾಗೂ ಸದರಿ ಮಳಿಗೆಯಲ್ಲಿ ಯಾವ ಬದಲಾವಣೆ ಮಾಡಬಾರದು. ನಗರಸಭೆಯ ಅನುಮತಿ ಇಲ್ಲದೇ ಯಾವುದೇ ರಿಪೇರಿ/ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

15. ಖಾಯಂ ಬಿಡ್ಡುದಾರರು 1964 ರ ಕರ್ನಾಟಕ ಪುರಸಭಾ ಕಾಯಿದೆ ಪ್ರಕರಣ 256 ರ ಪ್ರಕಾರ ಉದ್ದಿಮೆ ಪರವಾನಗಿ ಪಡೆಯತಕ್ಕದ್ದು.

16. ಅಖೈರು ಪರವಾನಗಿ ಫೀ ಪಾವತಿದಾರನು ಷರತ್ತುಗಳಿಗೆ ಅನುಗುಣವಾಗಿ ಸ್ವಂತ ಖರ್ಚಿನಿಂದ ರಿಜಿಸ್ಟರ್ ಕರಾರು ಮಾಡಿಸಿಕೊಟ್ಟು ನಂತರ ನಗರಸಭೆ ವತಿಯಿಂದ ಸಂಬಂಧಿಸಿದ ಉದ್ದಿಮೆಗೆ ಲೈಸೆನ್ಸ್‌ನ್ನು ಪಡೆದು ಪ್ರಾರಂಬಿಸತಕ್ಕದ್ದು. ಸರ್ಕಾರ ನಿಷಿದ್ದವೆಂದು ಪ್ರಕಟಿಸಿದ ವಸ್ತುಗಳನ್ನು , ಯಾವುದೇ ಪಟಾಕಿ, ಸ್ಫೋಟಕ ವಸ್ತುಗಳನ್ನು ಮಾರತಕ್ಕದ್ದಲ್ಲ.

17. ಅಖೈರು ಬಿಡ್‌ದಾರನು ಮಳಿಗೆಯನ್ನು ವಶಕ್ಕೆ ತೆಗೆದು ಕೊಳ್ಳುವ ಸಮಯದಲ್ಲಿ ಭದ್ರತೆಗಾಗಿ ತನ್ನ ಸ್ಥಿರಾಸ್ತಿಯನ್ನು ಅಥವಾ ಒಬ್ಬ ಸ್ಥಿರಾಸ್ತಿ ಉಳ್ಳ ಜಾಮೀನುದಾರನ ಸ್ಥಿರಾಸ್ತಿಯನ್ನು ಭದ್ರತೆಗಾಗಿ ಅಡಮಾನ ಮಾಡತಕ್ಕದ್ದು.

18. ಚಾಲ್ತಿಯಲ್ಲಿರುವ ಎಲ್ಲಾ ಕಾನೂನುಗಳು ಅನ್ವಯಿಸುತ್ತದೆ.

ಷರಾ:

ಇಸ್ತಿಹಾರ್‌ನಲ್ಲಿ ಕಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯ ಕಂಡುಬಂದ ನಿಬಂಧನೆಗಳನ್ನು ಸೇರಿಸಲು ಅಧ್ಯಕ್ಷರು, ಪೌರಾಯುಕ್ತರಿಗೆ ಅಧಿಕಾರ ಇರುತ್ತದೆ.

ವಿಸೂ: ಹರಾಜು ಷರತ್ತುಗಳು ಮತ್ತು ಪರವಾನಗಿಯ ನಿಬಂಧನೆಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯ ಪಡೆಯಬಹುದಾಗಿರುತ್ತೆ.

ಸಹಿ/-
ಪೌರ ಆಯುಕ್ತರು
ನಗರಸಭೆ, ಚಿಕ್ಕಮಗಳೂರು.